ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/96/2015-16. ದಿನಾಂಕ:21-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಸಿ.ಎನ್.ವಿಕಾಶ್ ತಂದೆ ಲೇಟ್ ಸಿ.ನಾಗರಾಜ<br>2)ಸಿ.ಎನ್.ವಿ[illegible]ಸ್ ತಂದೆ ಲೇಟ್ ಸಿ.ನಾಗರಾಜ<br>3)ಸಿ.ಅಶೋಕ ತಂದೆ ಲೇಟ್ ಚನ್ನಶೆಟ್ಟಿ ಕೊಟ್ರಪ್ಪ<br>4)ಸಿ.ಪ್ರಭು ತಂದೆ ಲೇಟ್ ಚನ್ನಶೆಟ್ಟಿ ಕೊಟ್ರಪ್ಪ<br>5)ಸಿ.ಪ್ರಕಾಶ ತಂದೆ ಲೇಟ್ ಚನ್ನಶೆಟ್ಟಿ ಕೊಟ್ರಪ್ಪ<br>ಪುರಬಿ ಆಸ್ಪತ್ರೇ ರಸ್ತೇ 02 ನೇ ಕ್ರಾಸ್<br>ಎಂ.ಸಿ.ಸಿ.ಬಿ.ಬ್ಲಾಕ್ ಡೋರ್ ನಂಬರ್: 2788/01<br>ದಾವಣಗೆರೆ (ತಾ) (ಜಿ) | 1)ವಿನೋದ ಗಂಡ ಲೇಟ್ ರವೀಂದ್ರ<br>2)ಪಾರ್ವತಿ ತಂದೆ ಚನ್ನಶೆಟ್ಟಿ ಕೊಟ್ರಪ್ಪ<br>3)ಜಯಕೊಟ್ರಮ್ಮ ಕೋಂ ಉಜ್ಜೀನಪ್ಪ<br>ಡೋರ್ ನಂಬರ್: 2788/1 ಮುರಾಘರಾಜೇಂದ್ರ<br>ಕೃಪಾ ಎಂ.ಸಿ.ಸಿ.ಬಿ.ಬ್ಲಾಕ್ ದಾವಣಗೆರೆ (ತಾಈ(ಜಿ)<br>4)ಶಿವಲಿಲಾ ಕೋಂ ಡಿ.ಚಾಮರಸ<br>ಡೋರ್ ನಂಬರ್: 1809/72 17 ನೇ ಕ್ರಾಸ್<br>ಅಂಜೀನೇಯ ಬಡಾವಣೆ ದಾವಣಗೆರೆ (ತಾ) (ಜಿ) |
| ಕೂಡ್ಲಿಗಿ ತಾಲೂಕು ಶಿರಿನಾಯ್ಕನಹಳ್ಳಿ ಗ್ರಾಮದ ಸನಂ 8/1/9. 15/2/1. ವಿಸ್ತೀರ್ಣ 0-50. 1-03.ಎಕ್ರೆ ಜಮೀನುಗಳನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಶಿರಿನಾಯ್ಕನಹಳ್ಳಿ ಗ್ರಾಮದ ಸನಂ 8/1/9. 15/2/1. ವಿಸ್ತೀರ್ಣ 0-50. 1-03.ಎಕ್ರೆ ಜಮೀನುಗಳನ್ನು ದಾವಣಗೆರೆ ನಗರದ ಸಿ.ಪ್ರಕಾಶ ತಂದೆ ಚನ್ನಶೆಟ್ಟಿ ಕೊಟ್ರಪ್ಪ. ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಶಿರಿನಾಯ್ಕನಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 21-10-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ದಾವಣಗೆರೆ ನಗರದ ವಿನೋದ ಗಂಡ ಲೇಟ್ ರವೀಂದ್ರ. ಪಾರ್ವತಿ ಕೊಟ್ರಪ್ಪ. ಜಯಕೊಟ್ರಮ್ಮ ಕೊಂ ಉಜ್ಜೀನಪ್ಪ. ಶಿವಲಿಲಾ ಕೋಂ ಡಿ.ಚಾಮರಸ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 06/2015-16. ದಿನಾಂಕ 29-11-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 05-04-2016 ರಿಂದ 21-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಶಿರಿನಾಯ್ಕನಹಳ್ಳಿ ಗ್ರಾಮದ ಸನಂ 8/1/9. 15/2/1. ವಿಸ್ತೀರ್ಣ 0-50. 1-03. ಎಕ್ರೆ ಜಮೀನುಗಳು ನಮ್ಮ ತಂದೆಯವರಾದ ಚನ್ನಶೆಟ್ಟಿ ಕೊಟ್ರಪ್ಪ ತಂದೆ ಕೊಟ್ರಬಸಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 09-11-2000 ರಂದು ಹಾಗೂ ನಮ್ಮ ತಾಯಿಯವರಾದ ಕೊಟ್ರಮ್ಮ ಇವರು ದಿನಾಂಕ 21-07-2010 ರಂದು ನನ್ನ ಅಣ್ಣನಾದ ಸಿ.ನಾಗರಾಜ್ ತಂದೆ ಕೊಟ್ರಪ್ಪ ಇವರು 1998 ರಂದು ಹಾಗೂ ಇವರ ಹೆಂಡತಿ ಜಯಕೊಟ್ರಮ್ಮ ಇವರು 1982 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ನಮ್ಮಗಳ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಪು.ತಿ.ನೋ-2

ವಿಚಾರಣೆಯಲ್ಲಿ ತಕರಾರುದಾರರ ಹಾಜರಾಗಿದ್ದು ಸದರಿ ವಿವಾದಿತ ಜಮೀನುಗಳನ್ನು ನಮ್ಮ ಜೀವಂತ ಇರುವಾಗ ಎಂದಿಗೂ ಪಾಲು ವಿಭಾಗ ಮಾಡಿ ಕೊಂಡಿರುವುದಿಲ್ಲ ಹಾಗೂ ಯಾವುದೇ ಅಸ್ತೀಗಳ ವಿಭಾಗವಾಗಿರುವುದಿಲ್ಲ 2005 ರ ಸುಪ್ರೀಂಕೋರ್ಟ ನೀಡಿದ ಆದೇಶವು ನಮಗೆ ಅನ್ವಯವಾಗುತ್ತದೆ. ಕಾರಣ ಸದರಿ ಆಸ್ತೀಯಲ್ಲಿ ನಮ್ಮೆಲ್ಲರಿಗೂ ಹಕ್ಕು ಇರುತ್ತದೆ. ಸದರಿ ಆಸ್ತೀ ನಮ್ಮ ಒಪ್ಪಿಗೆ ಇಲ್ಲದೇ ಅರ್ಜಿದಾರರು ತಮ್ಮ ಹೆಸರನ್ನು ಸೇರಿಸಲು ಅರ್ಜಿ ಕೊಟ್ಟಿರುತ್ತಾರೆ. ಕಾರಣ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆ ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ಪೋತಿವಾರಸು ಹಕ್ಕಿನ ಪ್ರಕಾರ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಶಿರಿನಾಯ್ಕನಹಳ್ಳಿ ಗ್ರಾಮದ ಸನಂ 8/1/9. 15/2/1. ವಿಸ್ತೀರ್ಣ 0-50. 1-03. ಎಕ್ರೆ ಜಮೀನುಗಳನ್ನು ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರಾದ ಸಿ.ಎನ್.ವಿಕಾಶ್ ತಂದೆ ಲೇಟ್ ಸಿ.ನಾಗರಾಜ್. ಸಿ.ಎನ್.ವಿ[illegible] ತಂದೆ ಲೇಟ್ ಸಿ.ನಾಗರಾಜ್. ಅಶೋಕ ತಂದೆ ಲೇಟ್ ಚನ್ನಶೆಟ್ಟಿ ಕೊಟ್ರಪ್ಪ. ಸಿ.ಪ್ರಭು ತಂದೆ ಲೇಟ್ ಚನ್ನಶೆಟ್ಟಿ ಕೊಟ್ರಪ್ಪ. ಸಿ.ಪ್ರಕಾಶ್ ತಂದೆ ಲೇಟ್ ಚನ್ನಶೆಟ್ಟಿ ಕೊಟ್ರಪ್ಪ. ವಿನೋದಮ್ಮ ತಂದೆ ಲೇಟ್ ಚನ್ನಶೆಟ್ಟಿ ಕೊಟ್ರಪ್ಪ. ಪಾರ್ವತಿ ತಂದೆ ಲೇಟ್ ಚನ್ನಶೆಟ್ಟಿ ಕೊಟ್ರಪ್ಪ ಶಿವಲೀಲಾ ತಂದೆ ಲೇಟ್ ಚನ್ನಶೆಟ್ಟಿ ಕೊಟ್ರಪ್ಪ. ಜಯಕೊಟ್ರಮ್ಮ ತಂದೆ ಲೇಟ್ ಚನ್ನಶೆಟ್ಟಿ ಕೊಟ್ರಪ್ಪ. ದಾವಣಗೆರೆ ನಗರ ಇವರುಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 21-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಾರ್ಯಾಲಯ
ಕೊಟ್ಟೂರು-583 134

ಇದರ ಪ್ರತಿಯನ್ನು:

1) ಅರ್ಜಿದಾರರಾದ ಸಿ.ಎನ್.ವಿಕಾಶ್ ತಂದೆ ಲೇಟ್ ಸಿ.ನಾಗರಾಜ್ ಹಾಗೂ ಇತರರು ಸುರಬಿ ಆಸ್ಪತ್ರೆ ರಸ್ತೇ 02 ನೇ ಕ್ರಾಸ್ ಎಂ.ಸಿ.ಸಿ.ಬಿ.ಬ್ಲಾಕ್ ಡೋರ್ ನಂಬರ್: 2788/1. ದಾವಣಗೆರೆ ತಾಲೂಕು ದಾವಣಗೆರೆ ಜಿಲ್ಲಾ ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ವಿನೋದ ಗಂಡ ಲೇಟ್ ರವೀಂದ್ರ ಹಾಗೂ ಇತರರು ಡೋರ್ ನಂಬರ್: 2788/1. ಮುರಾಘರಾಜೇಂದ್ರ ಕೃಪಾ ಎಂ.ಸಿ.ಸಿ.ಬಿ.ಬ್ಲಾಕ್ ದಾವಣಗೆರೆ ನಗರ ದಾವಣಗೆರೆ ಜಿಲ್ಲಾ ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.